ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Office of the Registrar (Evaluation), Central College Campus, Dr. B.R. Ambedkar Veedhi,
Bengaluru – 560 001. E-mail: registrarevlubcu@gmail.com, Ph.No.080-22295559

ಸಂಖ್ಯೆ:ಬೆಂ.ನ.ವಿ./ಪ.ವಿ/01/2ನೇ ಘಟಿಕೋತ್ಸವ/2023-24 ದಿನಾಂಕ:11.07.2023

# ಅಭಿವಂದನಾ ಪತ್ರ

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ವಾರ್ಷಿಕ ಘಟಿಕೋತ್ಸವ ದಿನಾಂಕ 10.07.2023ರಂದು ಸೋಮವಾರ ಯಶಸ್ವಿಯಾಗಿ ನೆರವೇರಿ, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ಯಶಸ್ಸಿಗೆ ಮುಖ್ಯ ಕಾರಣರಾದ ನಮ್ಮೆಲ್ಲರ ನೆಚ್ಚಿನ ಕುಲಪತಿಗಳ ನೇತೃತ್ವ ಮತ್ತು ಪ್ರತಿ ವಿಷಯದಲ್ಲೂ ಅವರು ತೋರಿಸಿದ ಆಸಕ್ತಿ ಹಾಗೂ ಮಾರ್ಗದರ್ಶನ. ಇವರ ಜೊತೆ ಕೈ ಜೋಡಿಸಿದ ಮತ್ತು ಎಲ್ಲ ಕೆಲಸ ಕಾರ್ಯಗಳನ್ನು ಯಾವುದೇ ನ್ಯೂನತೆ ಬರದಂತೆ ನೋಡಿಕೊಂಡ ಮತ್ತು ಮುತುವರ್ಜಿಯಿಂದ ಕಾರ್ಯ ನಿರ್ವಹಿಸಿದ ಎಲ್ಲ ಕಮಿಟಿಗಳ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳು, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು, ಎಲ್ಲ ನೌಕರ ವರ್ಗದವರೂ ಕೂಡಾ ಕಾರಣರಾಗಿದ್ದಾರೆ. ಘಟಿಕೋತ್ಸವಕ್ಕೆ ಆಗಮಿಸಿ ಗೌರವ ಡಾಕ್ಟರೇಟ್ ಪ್ರಶಸ್ತಿ ಸ್ವೀಕರಿಸಿದ ಗಣ್ಯರಿಗೂ, ಚಿನ್ನದ ಪದಕ, ರ್‍ಯಾಂಕ್ ಪ್ರಮಾಣ ಪತ್ರ ಸ್ವೀಕರಿಸಿದ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಅಭಿವಂದನೆಗಳು. ತುಂಬಾ ಸಕ್ರಿಯವಾಗಿ ಓಡಾಡಿ, ಎಲ್ಲ ಕೆಲಸಗಳಲ್ಲಿ ಸಹಕಾರ ನೀಡಿದ ವಿದ್ಯಾರ್ಥಿ ಮಿತ್ರರಿಗೂ ಸಹ ಹೃತ್ಪೂರ್ವಕ ವಂದನೆಗಳು. ವಿಶ್ವವಿದ್ಯಾಲಯದ ಆವರಣವನ್ನು ಅತ್ಯಂತ ಸುಂದರವಾಗಿ ಅಲಂಕರಿಸಿ, ಸುಂದರವಾಗಿ ಕಾಣುವಂತೆ ಮಾಡಿದ ಅಭಿಯಂತರ ವಿಭಾಗ, ಉದ್ಯಾನ ಇಲಾಖೆಯವರಿಗೆ ಮತ್ತು ಘಟಿಕೋತ್ಸವ ಯಶಸ್ಸಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೆಲಸ ಮಾಡಿದ ಎಲ್ಲರಿಗೂ ಹೃದಯ ಪೂರ್ವಕ ಅಭಿವಂದನೆಗಳು.

ಎರಡನೇ ಘಟಿಕೋತ್ಸವದ ಯಶಸ್ಸಿಗೆ ಪಾಲ್ಗೊಂಡ ಎಲ್ಲ ಮಹಾವಿದ್ಯಾಲಯದ ಪ್ರಾಂಶುಪಾಲರುಗಳು, ಚಿನ್ನದ ಪದಕಗಳನ್ನು ನೀಡಲು ದತ್ತಿಗಳನ್ನು ಸ್ಥಾಪಿಸಿರುವ ದಾನಿಗಳು, ಸೇವೆಸಲ್ಲಿಸಿ ನಿವೃತ್ತರಾಗಿರುವ ಪ್ರಾಧ್ಯಾಪಕ ಹಾಗೂ ಇತರೆ ಸಿಬ್ಬಂದಿವರ್ಗದವರು, ಹಿಂದಿನ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು. ನಮ್ಮ ಆಹ್ವಾನವನ್ನು ಮನ್ನಿಸಿ ಘಟಿಕೋತ್ಸವಕ್ಕೆ ಆಗಮಿಸಿದ ಗಣ್ಯರು, ಹಾಗೂ ಇತರೆ ಎಲ್ಲರಿಗೂ ಹೃತ್ಪೂರ್ವಕ ನಮನಗಳು.

ಘಟಿಕೋತ್ಸವ ಕುರಿತು ಪತ್ರಿಕೆಗಳು ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ವಿವರವಾಗಿ ವರದಿ ಮಾಡಿದ ಎಲ್ಲ ಪತ್ರಕರ್ತರಿಗೂ, ಮಾಧ್ಯಮ ಮಿತ್ರರಿಗೂ ಈ ಪತ್ರದ ಮೂಲಕ ವಿಶವಿದ್ಯಾಲಯವು ವಂದಿಸುತ್ತದೆ.

ಕುಲಸಚಿವರು (ಮೌಲ್ಯಮಾಪನ)
ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್